# JAIN COLLEGE

Address: #463/465, 18th Main Road, SS Royal, 80 Feet Road
Rajarajeshwari Nagar, Bangalore - 560 098

**Date:** **II PUC** **SUBJECT: KANNADA**

**II MOCK QUESTION PAPER**

**9:30 AM – 12:45 PM**

**Time Duration: 3 Hrs 15 Mins** **Total Marks: 100**

**ಸೂಚನೆಗಳು :**

- ಒಂದುವಾಕ್ಯದ ಎಲ್ಲಾ ಪ್ರಶ್ನೆಗಳಿಗೆ ಕಡ್ಡಾಯವಾಗಿ ಉತ್ತರಿಸಿ
- ಪ್ರತಿಯೊಂದು ವಿಭಾಗದಲ್ಲಿ ನೀಡಲಾಗಿರುವ ಆಯ್ಕೆಗಳಿಗೆ ಅನುಗುಣವಾಗಿ ಉತ್ತರಿಸಿ.
- ಹೆಚ್ಚುವರಿ ಪ್ರಶ್ನೋತ್ತರಗಳನ್ನು ಬರೆಯದಂತೆ ಗಮನವಹಿಸಿ.
- ಪ್ರಶ್ನೆಗಳ ಸಂಖ್ಯೆಯನ್ನು ತಪ್ಪಿಲ್ಲದಂತೆ ನಮೂದಿಸಿ.

**I ಒಂದು ವಾಕ್ಯದಲ್ಲಿ ಉತ್ತರಿಸಿ.** 10X1=10

1. ರಾವಣನು ಮಹಾಪೂಜೆಯನ್ನು ಎಲ್ಲಿ ಸಲ್ಲಿಸಿದನು?
2. ಯಾವ ಮಾತಿಗೆ ಕೊನೆಯಿಲ್ಲವೆಂದು ಪುರಂದರದಾಸರು ಹೇಳಿದ್ದಾರೆ?
3. ಜೀಸಸ್‌ನ ಮುಖ ಮುದ್ರೆ ಏನನ್ನು ನುಡಿವಂತಿದೆ?
4. ಜನರಿಗೆ ಯಾವುದಕ್ಕೆ ಗತಿಯಿಲ್ಲ?
5. ಕೆಂಪು ಪಟ್ಟಿಗೆ ಸೇರಿದ ಪ್ರಾಣಿ ಯಾವುದು?
6. ಚಿಪ್ ಎಂದರೇನು?
7. ಲೋಕಲ್ ಸುದ್ದಿಗಳಿಗೆ ಎಲ್ಲಿ ಪ್ರಾಶಸ್ತ್ಯವಿದೆ?
8. ರೆಹಮಾನ್ ಐವಿಟ್ನೆಸ್ ಎಂದು ಯಾರನ್ನು ತೋರಿಸಿದರು?
9. ಟೆಲಿಫೋನ್ ಸಿಬ್ಬಂದಿ ಯಾರ ವಿರುದ್ಧ ಮುಷ್ಕರ ಹೂಡಿದರು?
10. ರೇಂಜರ್ ಆನೆಗೆ ಶೂಟ್ ಮಾಡುವಂತೆ ಯಾರಿಗೆ ಸೂಚಿಸಿದರು?

**II ಅ. ನಾಲ್ಕು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ.** 4X2=8

11. ಉಳಿದ ನಾಲ್ವರು ಪಾಂಡವರ ಬಗ್ಗೆ ದ್ರೌಪದಿಯ ಅಭಿಪ್ರಾಯವೇನು?
12. ಯಾರಿಂದ ಯಾವುದನ್ನು ಹೇಗೆ ಕಲಿಯಬೇಕೆಂದು ಸೋಮನಾಥ ಹೇಳಿದ್ದಾನೆ?
13. ಮಗುವಿನ ಪಾಲಿಗೆ ತಾಯಿ ಹೇಗಿದ್ದಾಳೆ?
14. ಯಾವ ಸಂದೇಶವನ್ನು ನೀಡುವ ರೀತಿಯಲ್ಲಿ ಜೀಸಸ್ ಶಿಲುಬೆಯೇರಿದ್ದಾನೆ?
15. ಆತ್ಮಕ್ಕೆ ಕಮಟು ಹತ್ತುವುದು ಎಂದರೇನು?

**ಆ. ಕೆಳಗಿನ ಪ್ರಶ್ನೆಗಳಲ್ಲಿ ಮೂರಕ್ಕೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ.** 3X2=6

16. ಸಿಂಹಬಾಲದ ಕೋತಿಗಳಿಗೆ ಒದಗಿದ ತೊಂದರೆ ಏನು?
17. ಧಣಿ ಪತ್ನಿ ಬೆಳ್ಳಿಲೋಟವನ್ನು ಹೇಗೆ ಪರಿಚಯಿಸಿದ್ದಾಳೆ?
18. ಮುದ್ದಣನನ್ನು ಮನೋರಮೆ ಹೇಗೆ ಉಪಚರಿಸಿದಳು?
19. ಭಾವೈಕ್ಯತೆ ಈ ದೇಶದಲ್ಲಿ ಎಲ್ಲಿದೆ?

**ಇ. ಕೆಳಗಿನ ಪ್ರಶ್ನೆಗಳಲ್ಲಿ ಮೂರಕ್ಕೆ ಮಾತ್ರ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ.** 3X2=6

20.ನಿರೂಪಕರಿಗೆ ಆನೆಗಳ ಬಗ್ಗೆ ಯಾವ ಅನುಮಾನ ಮೂಡಿತು?

21.ಡ್ರೈವರ್‌ನ ತಲೆ ಜಜ್ಜಿ ಹೋದದ್ದುಹೇಗೆ? ಆನೆ ಅದಕ್ಕೆ ಕಾರಣವೇ?

22.ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸಾದುದೇಕೆ?

23.ಆನೆಯನ್ನು ಹದ್ದುಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದ?

**III ಅ. ಕೆಳಗಿನ ಯಾವುದಾದರು ಎರಡು ವಾಕ್ಯಗಳನ್ನು ಕುರಿತು ಸಂದರ್ಭ ಸ್ವಾರಸ್ಯ ಬರೆಯಿರಿ.** 2X3=6

24.ಕೃತಾಂತ ಜಿಹ್ವೆ ಪೊಡಕರಿಸುವವೊಲ್.

25.ನಾರುವ ದುರ್ಗಂಧ ಬಿಡಬಲ್ಲುದೆ.

26.ಬಾಳ ಮರುಗ್ಯಾಳ ಮನದೊಳಗ

**ಆ. ಕೆಳಗಿನ ಯಾವುದಾದರೂ <u>ಒಂದು</u> ವಾಕ್ಯವನ್ನು ಕುರಿತು ಸಂದರ್ಭ ಸ್ವಾರಸ್ಯ ಬರೆಯಿರಿ.** 1X3=3

27.ವ್ಯಕ್ತಿಗಿಂತ ರಾಷ್ಟ್ರ ದೊಡ್ಡದು.

28.ಪದ್ಯಂ ವದ್ಯಂ ಗದ್ಯಂ ಹೃದ್ಯಂ

**ಇ. ಕೆಳಗಿನ ಯಾವುದಾದರು <u>ಒಂದು</u> ವಾಕ್ಯವನ್ನು ಕುರಿತು ಸಂದರ್ಭ ಸ್ವಾರಸ್ಯ ಬರೆಯಿರಿ.** 1X3=3

29.ವೆಪನ್ ಸಾರ್ ವೆಪನ್ ನಮಗೆ ಮುಖ್ಯ.

30.ಹೊರಗಡೆಯಿಂದ ಎಕ್ಸ್‌ಪೋರ್ಟ್ ಆದವು.

**IV ಅ. ಕೆಳಗಿನ ಯಾವುದಾದರು <u>ಮೂರು</u> ಪ್ರಶ್ನೆಗಳಿಗೆ ಐದಾರು ವಾಕ್ಯದಲ್ಲಿ ಉತ್ತರಿಸಿ.** 3X4=12

31.ರಾವಣನಲ್ಲಿ ಕಂಡುಬರುವ ಪಶ್ಚಾತ್ತಾಪವನ್ನು ಕವಿ ಹೇಗೆ ನಿರೂಪಿಸಿದ್ದಾನೆ?

32.ಭೀಮನು ದ್ರೌಪದಿಯನ್ನು ಹೇಗೆ ಸಂತೈಸಿದನು?

33.ಮಗ ಸೊಸೆ ಮತ್ತು ಮೊಮ್ಮಗಳು ಮುದುಕಿಯನ್ನು ಹೇಗೆ ನಡೆಸಿಕೊಳ್ಳುವರು?

34.ಬಾಳಿನ ಅಶಾಶ್ವತತೆ ಮತ್ತು ಪ್ರಕೃತಿಯ ನಿತ್ಯನೂತನತೆಯ ಗುಣವನ್ನು 'ಬೆಳಗುಜಾವ' ಕವನದಲ್ಲಿ ಕವಿ ಹೇಗೆ ವಿವರಿಸಿದ್ದಾನೆ.

**ಆ. ಕೆಳಗಿನ ಯಾವುದಾದರು ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯದಲ್ಲಿ ಉತ್ತರಿಸಿ.** 2X4=8

35.ಬಸಲಿಂಗ ಡಾ|| ತಿಮ್ಮಪ್ಪನವರ ಸೂಚನೆಗಳನ್ನು ಪಾಲಿಸದೇ ಇರಲು ಕಾರಣವೇನು?

36.ವಾಲ್ ಪರ್ಕೈಗೆ ಬಂದ ಮಾರ್ಷ್ ಅಲ್ಲಿ ಹೇಗೆ ನೆಲೆಯೂರಿದನು? ವಿವರಿಸಿ.

37.ಹೊರನಾಡಿನ ಕನ್ನಡಿಗರು ಇಲ್ಲಿ ನೆಲೆಸಿರುವಾಗ ಅವರ ಜವಾಬ್ದಾರಿಗಳೇನು?

**ಇ. ಕೆಳಗಿನ ಯಾವುದಾದರು <u>ಎರಡು</u> ಪ್ರಶ್ನೆಗಳಿಗೆ ಐದಾರು ವಾಕ್ಯದಲ್ಲಿ ಉತ್ತರಿಸಿ.** 2X4=8

38.ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲವೇಕೆ?

39.ಪೋಸ್ಟ್‌ಮೆನ್ ಜಬ್ಬಾರನ ಬವಣೆಯನ್ನು ನಿರೂಪಕರು ಹೇಗೆ ವಿವರಿಸಿದ್ದಾರೆ?

40.ನಾಗರಾಜ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯವೇನು?

**V ಅ. ಕೆಳಗಿನ ಯಾವುದಾದರು <u>ಒಂದು</u> ಪದ್ಯದ ಭಾವಾರ್ಥ ಬರೆಯಿರಿ.** 1X5-5

41. ರಾಮನಿನಗಲ್ಚಿ ತಂದಾ
ನೀ ಮಾನಿನಿಗಿನಿತು ದುಃಖಮಂ ಪುಟ್ಟಿಸಿದೆ
ಕಾಮವ್ಯಾಮೋಹದಿನಾ
ಶಾಮುಖಮಂ ಪುದಿಯೆ ದುರ್ಯಶಃಪಟಹರವಂ

**ಅಥವಾ**

42.ಹಂಚಿಕೊಂಡಿದ್ದಾರೆ ಅಪ್ಪ ಅಮ್ಮನನ್ನು
ಇಲ್ಲಿದೊಡ್ಡ ಮಗನ ತಾವಲ್ಲಿ ಮುದುಕಿ, ಸದ್ಯ ಕನ್ನಡದೇಶ
ಮಗ ಸೊಸೆ ಈಚೆಗೆ ಹೋದಾಗಲಾದರೂ ನಾಲ್ಕು ಮಾತಾಡಿ

ತೀರಿಸಿಕೊಳ್ಳುತ್ತಾಳೆ ಬಾಯತುರಿಕೆ, ಪಾಪ ಮುದುಕ ದೂರದ
ಅಸ್ಸಾಮಿನಲ್ಲಿ ಅಲ್ಲಿಯ ಮಾತು ಅವನಿಗೆ ಸಸೇಮಿರ ಬರದು

**VI ಭಾಷಾಭ್ಯಾಸ**

**ಆ. ಕೆಳಗಿನ ಆರು ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ.** 2X6=12

43. ಅರ್ಥ ಬರೆಯಿರಿ – ಉರಗ, ಕಡಲು
44. ಗುಣವಾಚಕಗಳನ್ನು ಗುರುತಿಸಿ – ಎಳೆ ಬಿಸಿಲು, ದೊಡ್ಡಕಲ್ಲು
45. ಸಮಾನಾರ್ಥ ಬರೆಯಿರಿ – ಹರಿ, ದೊರೆ
46. ಕ್ರಿಯಾಪದಗಳ ಕಾಲವನ್ನು ಬರೆಯಿರಿ – ತಿನ್ನುವುದು, ಬರುತ್ತವೆ
47. ತದ್ಭವಗಳನ್ನು ಬರೆಯಿರಿ – ಸಂಧ್ಯಾ, ಆಯುಷ್ಯ
48. ನುಡಿಗಟ್ಟುಗಳನ್ನು ವಾಕ್ಯರೂಪದಲ್ಲಿ ಬರೆಯಿರಿ – ಗಾಳಿಗೆತೂರು, ಕೈಕೊಡು
49. ನಾಮಪದಗಳ ವಿಭಕ್ತಿಯನ್ನು ಗುರುತಿಸಿ – ಧರೆಯೊಳ್, ಕುದುಪನನ್ನು

**ಇ. ಈ ಕೆಳಗಿನ ಯಾವುದಾದರು ಒಂದನ್ನು ಕುರಿತು ಪ್ರಬಂಧ ಬರೆಯಿರಿ.** 1X5=5

50. ಕಂಪ್ಯೂಟರ್
51. ಪುಸ್ತಕಗಳ ಮಹತ್ವ.

**ಈ. ಕೆಳಗಿನವುಗಳಲ್ಲಿ ಒಂದಕ್ಕೆ ಉತ್ತರಿಸಿ.** 1X4=4

52. ಗ್ರಂಥಾಲಯವನ್ನು ಆರಂಭಿಸಲು ಕೋರಿ ಮುಖ್ಯ ಗ್ರಂಥಪಾಲಕರಿಗೆ ಪತ್ರ ಬರೆಯಿರಿ.

ಅಥವಾ

53. ಕಾಲೇಜಿನಲ್ಲಿ ಆಚರಿಸಿದ ಸಾಂಸ್ಕೃತಿಕ ಕಾರ್ಯಕ್ರಮ ಕುರಿತು ಗೆಳೆಯ/ಗೆಳತಿಗೆ ಪತ್ರ ಬರೆಯಿರಿ.

**ಉ. ಒಂದು ಗಾದೆಯನ್ನು ವಿಸ್ತರಿಸಿ ಬರೆಯಿರಿ.** 1X4=4

54. ಹಣಕ್ಕಿಂತ ಗುಣ ಮುಖ್ಯ
55. ಸಂತೆಯ ಹೊತ್ತಿಗೆ ಮೂರು ಮೊಳ ನೇಯ್ದಂತೆ

**********************************